ಅಸಹನೆಯಿಂದ ಹೇಳಿದ್ದರು.

'ಹ್ಞೂ ಆಂಟಿ... ತರಿಸ್ತೀನಿ...'

ಸಾವಿನ ಮನೆಯಲ್ಲವಾ, ಇಲ್ಲಿ ಕಾಫಿ ಟೀ ತರಿಸಬೇಕಾ, ನಾವೇ ತರಿಸೋದಾದರೆ ನಮಗೆಲ್ಲ ದುಃಖ ಪಡೋದಕ್ಕಾದರೂ ಸಮಯ ಬೇಡವಾ ಎಂಬೆಲ್ಲ ಯೋಚನೆಗಳು ಸರಿದುಹೋದ ಹಾಗೆ ಮಕ್ಕಳು ಕೂಡ ಹಸಿದುಕೊಂಡಿದ್ದರು ಎನ್ನುವುದು ನೆನಪಾಯಿತು. ಕುಸುಮಾಳನ್ನು ಕರೆದು 'ನಿನ್ನ ಗಂಡನಿಗೆ ಒಂಚೂರು ಎರಡೂ ಮಕ್ಕಳನ್ನು ಕರ್ಕೊಂಡು ಹೋಗಿ ಏನಾದರೂ ತಿನ್ನಿಸಿಕೊಂಡು ಬರೋಕೆ ಹೇಳು' ಎಂದು ಅವಳ ಮಗನ ಜೊತೆ ತನ್ನ ಮಗನನ್ನೂ ಕರೆದು ಹೋಗ್ರೋ ಇಬ್ಬರೂ, ಏನಾದರೂ ತಿಂದು ಬನ್ನಿ ಎಂದಳು.

ಸೂರ್ಯ ಎಲ್ಲೂ ಕಾಣಿಸಿರಲಿಲ್ಲ. ಇದೆಲ್ಲಿ ಹೋದ ಇವನು ಈ ಘಳಿಗೆಯಲ್ಲಿ, ಕಾಫಿ ಬೇರೆ ಯಾರ ಹತ್ತಿರ ತರಿಸೋದು ಎಂದುಕೊಂಡು ಬಂದಳು. ಸೂರ್ಯ ಮೆಟ್ಟಿಲಿನ ಮೇಲೆಲ್ಲೋ ಕುಳಿತಿದ್ದ. ಜೊತೆಗೆ ಪದ್ದಮ್ಮನ ಅಕ್ಕತಂಗಿಯರ ಮಕ್ಕಳು ಕುಳಿತಿದ್ದರು. ಅವರಿಗೆ ಹೇಳಿ ಬರುವಷ್ಟರಲ್ಲಿ ಎಲ್ಲರೂ ಒಬ್ಬೊಬ್ಬರಾಗಿ ಹೋಗಿ ಊಟ ಮಾಡಿಕೊಂಡು ಬರಲು ಶುರು ಮಾಡಿದರು.



ಕಾಫಿ ಲೋಟಗಳೆಲ್ಲ ಒಂದು ಮೂಲೆಯಲ್ಲಿಟ್ಟು ಪದ್ದಮ್ಮನ ಬಳಿ ಹೋಗಿ ಸುಸ್ತಾಗಿ ಕುಳಿತಳು. ರಾತ್ರಿ ಹನ್ನೊಂದಾದರೂ ಪದ್ದಮ್ಮನ ಬಳಿ ಯಾರೂ ಸುಳಿದಿರಲಿಲ್ಲ. ಶಂಕರಪ್ಪನೂ ಕತ್ತಲಾದ ಹಾಗೆ ನಿಧಾನಕ್ಕೆ ದೂರ ಸರಿದು ಮೆತ್ತಗೆ ಕೋಣೆ ಸೇರಿ ಅಲ್ಲೇ ಕುರ್ಚಿ ಮೇಲೆ ಕುಳಿತು ತೂಕಡಿಸಿದ್ದ.

ಇದೇನು ಭಯವೋ, ಹಿಂಜರಿಕೆಯೋ ಎನ್ನುವ ಕಿರಿಕಿರಿಯಲ್ಲೇ ಜಾನುಗೆ ಒಂಟಿತನ ಕಾಡಲಾರಂಭಿಸಿತ್ತು. ಎಷ್ಟೋ ದಿನ ನಿದ್ದೆ ಬರದೇ ಟಿವಿ ನೋಡುತ್ತಿದ್ದ ಜಾನು ಜೊತೆ ಪದ್ದಮ್ಮನೂ ಕೂತು ಸಿನೆಮಾ ನೋಡುತ್ತಿದ್ದದ್ದನ್ನು ನೆನಪಿಸಿಕೊಳ್ಳುತ್ತಾ ಪದ್ದಮ್ಮನ ಮುಖ, ಕೆನ್ನೆಯನ್ನೊಮ್ಮೆ ಸವರಿ ಮೂಗು ಗಟ್ಟಿಯಾಗಿದೆ ಎಂದುಕೊಂಡಳು. ಯಾವತ್ತೂ ಕತ್ತಲೆಯಲ್ಲಿ ಒಬ್ಬರೇ ಕೂರಲೂ ಧೈರ್ಯ ಮಾಡದ ಪದ್ದಮ್ಮ ಇವತ್ತು ಮೌನವಾಗಿದ್ದುದು ಜಾನುಗೆ ಹೊಟ್ಟೆ ತೊಳೆಸಿದಂತಾಯಿತು.

ನಿಧಾನಕ್ಕೆ ಊಟ, ಕಾಫಿ ಎಲ್ಲ ಮುಗಿಸಿದವರು ಮತ್ತೆ ಬಂದು ಕುರ್ಚಿಗಳಲ್ಲಿ ಕೂತಿದ್ದರು. ಇಡೀ ರಾತ್ರಿ ಮಲಗಬಾರದು ಎನ್ನುವ ಶಾಸ್ತ್ರವೇ ಕೆಲವರಿಗೆ ಛೇ, ಬೆಳಿಗ್ಗೆಯೇ ಬರಬೇಕಿತ್ತು ಎನಿಸಿದ್ದೂ ಹೌದು.

'ಆಸ್ಪತ್ರೆಗೇ ಬಂದು ಹೋಗಿಬಿಡಬೇಕಿತ್ತು, ಮನೆಗೆ ಬಂದ ಮೇಲೆ ಇರಬೇಕು' ಯಾರೋ ಹೇಳುತ್ತಿದ್ದರು. ಇದ್ದಕ್ಕಿದ್ದ ಹಾಗೆ ಯಾರದೋ ಮೊಬೈಲಿನಲ್ಲಿ ಹಾಡು ಕೇಳಿಸುತ್ತಿತ್ತು. ಇನ್ನೊಂದಿಬ್ಬರು ರೀಲ್ಸ್ ನೋಡ್ತಾ ಮುಸಿಮುಸಿ ನಗುತ್ತಾ ಇದ್ದರು. ಯಾವುದೋ ಧಾರಾವಾಹಿ ಬಗ್ಗೆ, ಯಾವುದೋ ಶೋ ಬಗ್ಗೆ ಮಾತುಗಳು ಶುರುವಾಗಿದ್ದವು. ಕೋಣೆಯಲ್ಲಿ ತೂಕಡಿಸುತ್ತಾ ಕೂತಿದ್ದ ಕುಸುಮಾ ಎದ್ದು ಬಂದಳು.

'ಮೊನ್ನೆ ಇನ್ನೂ ತಂದಿದ್ದ ಸೀರೆ ಜಾನು ಉಡಿಸೋ ಬದಲು ಹೊದಿಸೋ ಹಾಗಾಯ್ತಲ್ಲ' ಕುಸುಮಾ ಬಿಕ್ಕಳಿಸಲಾರಂಭಿಸಿದಳು.

ಇಡೀ ಮನೆಯಲ್ಲಿ ಮತ್ತೆ ಮೌನ. ಮೊಬೈಲುಗಳು ಆಫಾದವು. ಎಲ್ಲರ ಮುಖದಲ್ಲೂ ಮತ್ತೊಂದಿಷ್ಟು ವಿಷಾದ. ಕೆಲವರ ಕಣ್ಣಲ್ಲಿ ಪಸೆ.

'ಸಮಾಧಾನ ಮಾಡ್ಕೊಮ್ಮಾ ಕುಸುಮಾ, ನೀನೇ ಅತ್ತರೆ ನಿಮ್ಮಪ್ಪನಿಗೆ ಧೈರ್ಯ ಹೇಳೋರ್‍ಯಾರು'

'ಪದ್ದಿಗೆ ಸೀರೆಗಳು ಅಂದ್ರೆ ಪಂಚಪ್ರಾಣ ನೋಡು, ನೂರಿನ್ನೂರು ಸೀರೆಗಳು ತುಂಬಿತ್ತು ಬೀರುವಲ್ಲಿ. ಎಲ್ಲಾ ಚಂದದವೇ...' 'ಅದ್ಯಾವ ಸೀರೆನೂ ಒಂದೊರ್ಷ ಮುಟ್ಟಬಾರದಮ್ಮಾ ಜಾನು, ಒಂದು ವರ್ಷ ಆದಮೇಲೆ ನೀವು ಬಳಸಬಹುದು, ಅಥವಾ